# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:- 23-02-2021 ರಂದು ಬೆಳಗ್ಗೆ:-11.00 ಗಂಟೆಗೆ ವಾರ್ಡ್ ಸಂಖ್ಯೆ 125 ಮಾರೇನಹಳ್ಳಿ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿ.ಆರ್/35/2020-21/21-09-2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ. ಜಯಪ್ರಕಾಶ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗದವರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸದಸ್ಯರು:-**

| ಕ್ರ. ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ. ಜಯಪ್ರಕಾಶ್, ಎ.ಇ.ಇ ಘನತ್ಯಾಜ್ಯ | 9480683866 |
| 2 | ನವೀನ್ ಕುಮಾರ್ ಎಂ, ಸಹಾಯಕ ಅಭಿಯಂತರರು | 7899225559 |
| 3 | ಪುಟ್ಟಸ್ವಾಮಿ | 8494949024 |
| 4 | ಪ್ರವೀಣ್ ಕುಮಾರ್ ಪಿ | 9844363640 |
| 5 | ಹೆಚ್.ಟಿ.ರಾಮಯ್ಯ | 9480685077 |
| 6 | ಯೋಗೇಂದ್ರ, ಜಿ.ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು | 7411994937 |
| 7 | ರಾಹುಲ್ | 7026266677 |
| 8 | ವೆಂಕಟಯ್ಯ | 9444369278 |
| 9 | ಎಂ. ವೀರಪ್ಪ | 9444369278 |
| 10 | ಶ್ರೀರಾಮ್ ಆರ್.ಎಫ್ | 9480683341 |
| 11 | ಶಕಿಲಾಶೆಟ್ಟಿ | 9448249338 |
| 12 | ಸವಿತ ಎಸ್ | 7899721282 |
| 13 | ಮಮತಾ ವಿ | 9900866552 |
| 14 | ರೇಣುಕಾ ಪ್ರಸಾದ್ ಎ.ಆರ್.ಓ | |

ದಿನಾಂಕ: 23-02-2021 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನು ನೀಡಿರುತ್ತಾರೆ. ಈ ಕುರಿತಂತೆ ಕೆಳಕಂಡ ವಿಷಯಗಳನ್ನು ಚರ್ಚಿಸಿ ಸಂಭದಪಟ್ಟ ಅಧಿಕಾರಿಗಳು ಕ್ರಮವಹಿಸಲು ಸೂಚಿಸಲಾಯಿತು.

Scanned with CamScanner

- ಬೀದಿನಾಯಿಗಳ ಸಂಖ್ಯೆ ಹೆಚ್ಚಾಗಿ ಜನರ ಮೇಲೆ ನಾಯಿಗಳು ದಾಳಿ ಮಾಡುತ್ತಿರುವ ಕಾರಣ ವಾರ್ಡನ ಬಹುತೇಕ ಬಡಾವಣೆಯಲ್ಲಿ ರಾತ್ರಿಯ ಸಮಯ ಸಾರ್ವಜನಿಕರು ಓಡಾಡಲು ಹೆದರುವಂತಾಗಿರುತ್ತದೆ ಹಾಗೂ ನಾಯಿಗಳ ಕಚ್ಚಾಟದಿಂದ ರಾತ್ರಿ ಸಮಯ ನಿದ್ರಿಸಲು ತೊಂದರೆಯಾಗಿರುವ ಕಾರಣ ಬೀದಿನಾಯಿಗಳ ಬಗ್ಗೆ ಕ್ರಮವಹಿಸಲು ಸದಸ್ಯರು ಆಗ್ರಹಿಸಿರುತ್ತಾರೆ.
  ಕ್ರಮ: ಪಾಲಿಕೆಯ ಪಶುವೈದ್ಯಾಧಿಕಾರಿಗಳು,ಪಶ್ಚಿಮ ವಲಯ
- ವಾರ್ಡ ವ್ಯಾಪ್ತಿಯಲ್ಲಿ ಅಳವಡಿಸಿರುವ ಬಹುತೇಕ ಸಿಸಿಟಿವಿಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಹಾಗೂ ಇದರ ನಿರ್ವಹಣೆ ಇಲ್ಲದೆ ಸಿಸಿಟಿವಿಗಳು ನಿರುಪಯೋಗವಾಗಿದೆಯೆಂದು ಸದಸ್ಯರು ದೂರಿದ್ದು, ಜಾಗ್ರತೆ ವಾರ್ಡನ ಎಲ್ಲಾ ಸಿಸಿಟಿವಿಗಳು ಕಾರ್ಯ ನಿರ್ವಹಿಸುವಂತಾಗಲು ಕ್ರಮವಹಿಸುವಂತೆ ಸದಸ್ಯರು ಕೋರಿರುತ್ತಾರೆ.
  ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ಉಪವಿಭಾಗ
- ವಾರ್ಡನಲ್ಲಿ ಕಾನೂನು ಸುವ್ಯವಸ್ತೆ ಕಾಪಾಡಲು ಪೋಲೀಸ್ ಇಲಾಖೆಯಿಂದ ಸಂಜೆ ಮತ್ತು ಬೆಳಗಿನ ಸಮಯ ಬೀಟ್ ವ್ಯವಸ್ತೆ ಹೆಚ್ಚಿಸಲು ಸದಸ್ಯರು ಕೋರಿರುತ್ತಾರೆ.
  ಕ್ರಮ: ಪೋಲೀಸ್ಇಲಾಖೆ, ಲಾ ಅಂಡ್ ಆರ್ಡರ್, ವಿಜಯನಗರ ಪೋಲೀಸ್
- ರಸ್ತೆ ಬದಿ ಮರಗಳ ಒಣಗಿದ ರೆಂಬೆಗಳನ್ನು ತೆರವುಗೊಳಿಸುವುದು ಹಾಗೂ ವಿದ್ಯುತ್ ತಂತಿಗೆ ತಾಕುತ್ತಿರುವ ರೆಂಬೆಗಳನ್ನು ತೆರವುಗೊಳಿಸುವಂತೆ ಸದಸ್ಯರು ಆಗ್ರಹಿಸಿರುತ್ತಾರೆ.
  ಕ್ರಮ: ಪಾಲಿಕೆಯ ಅರಣ್ಯ ಇಲಾಖೆ ಮತ್ತು ಬೆಸ್ಕಂ ಇಲಾಖೆ
- ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಹಾಕುವುದನ್ನು ತಡೆಯಲು ಹೆಚ್ಚು ಮಾರ್ಶಲ್‌ಗಳನ್ನು ನೇಮಿಸಿ ಬ್ಲಾಕ್ ಸ್ಪಾಟ ಪಾಯಿಂಟ್ ಆಗುವುದನ್ನು ತಡೆಯುವುದು ಹಾಗೂ ಕೆಲ ಬೀದಿಗಳಲ್ಲಿ ಕಸ ತೆಗೆಯುವರು ಬರುವುದಿಲ್ಲವೆಂದು ಮತ್ತು ಕಸಸಾಗಿಸುವ ಆಟೋಗಳಿಗೆ ಕಡ್ಡಾಯವಾಗಿ ಮೈಕ್ ಅಳವಡಿಸಿ ಸಾರ್ವಜನಿಕರಲ್ಲಿ ಕಸ ವಿಂಗಡನೆ ಬಗ್ಗೆ ಅರಿವು ಮೂಡಿಸ ಬೇಕೆಂದು ಸದಸ್ಯರು ಆಗ್ರಹಿಸಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ,ವಾರ್ಡ ಸಭೆಗೆ ಗೈರುಆಗುತ್ತಿರುವುದಕ್ಕೆ ಸದಸ್ಯರು ಅಸಮದಾನ ವ್ಯಕ್ತಪಡಿಸಿರುತ್ತಾರೆ.
  ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಪಶ್ಚಿಮ ವಲಯ
- ರಸ್ತೆ ಬದಿ ಚರಂಡಿಗಳ ಹೂಳನ್ನು ಮಳೆಗಾಲದ ಮುನ್ನ ತೆಗೆಯಲು ಸೂಚಿಸಲಾಯಿತು
  ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ಉಪವಿಭಾಗ
- 9ನೇ ಮುಖ್ಯರಸ್ತೆ ಎಂ.ಸಿ.ಬಡಾವಣೆಯಲ್ಲಿ ಬಾಡಿಗೆಗೆ ಸಿಗುವ ದ್ವಿಚಕ್ರವಾಹನಗಳನ್ನು ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿ ಸಾರ್ವಜನಿಕರು ಓಡಾಡಲು ತೊಂದರೆಯಾಗಿದೆಎಂದು ಸದ್ಯಸ್ಯರು ದೂರಿರುತ್ತಾರೆ.
  ಕ್ರಮ:ಸಹಾಯಕ ಅಭಿಯಂತರರು,ವಾರ್ಡನಂ.125, ಮತ್ತು ಟ್ರಾಫಿಕ್ ಪೋಲೀಸ್
- ವಿಜಯನಗರ ಪೋಸ್ಟ್ ಆಫೀಸ್ ರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುವ ಕಾರಣ ಹಿರಿಯ ನಾಗರೀಕರಿಗೆ ಮತ್ತು ಮಕ್ಕಳು ರಸ್ತೆ ದಾಟಲು ತೊಂದರೆಯಾಗುತ್ತಿರುವ ಕಾರಣ ಈ ರಸ್ತೆಯಲ್ಲಿ ಹಂಪ್ ಅಳವಡಿಸಲು ಸದಸ್ಯರು ಕೋರಿರುತ್ತಾರೆ.
  ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ಉಪವಿಭಾಗ
- ಉದಯ ಶಾಲೆಯ ಅಕ್ಕ ಪಕ್ಕದ ಬಡಾವಣೆಗಳಲ್ಲಿ ಬೀದಿ ದೀಪಕ್ಕೆ ಟೈಮರ್ ಅಳವಡಿಸಲು ಕ್ರಮ ತೆಗೆದುಕೊಳ್ಳುವಂತೆ ಸದಸ್ಯರು ಕೋರಿರುತ್ತಾರೆ.
  ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳು, ಪಶ್ಚಿಮ ವಲಯ

Scanned with CamScanner

ಈ ಮೇಲ್ಕಂಡ ಎಲ್ಲಾ ಸಮಸ್ಯೆಗಳನ್ನು ಮುಂದಿನ ಸಭೆಯೊಳಗೆ ನಿವಾರಣೆ ಮಾಡಿ ಅನುಪಾಲನಾ ವರದಿಯನ್ನು ಸಂಬಂದಪಟ್ಟ ಅಧಿಕಾರಿಗಳು ನೀಡಬೇಕಾಗಿ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರ,
ವಾರ್ಡ ನಂ.125, ಮಾರೇನಹಳ್ಳಿ, ಬಿಬಿಎಂಪಿ

<u>ಪ್ರತಿಯನ್ನು:-</u>

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸದೆ.
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸದೆ.
4) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸದೆ.
5) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
6) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
7) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
8) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸದೆ.

Scanned with CamScanner